



ಚಾವುಂಡರಾಯ ಬಸದಿ

—ಈ ಕಥೆಯನ್ನು ಮೊದಲಿಗೆ ವರ್ಣಿಸಿದ ಗ್ರಂಥ ವಡ್ಡಾರಾಧನೆ. ಕ್ರಿ.ಶ.850ರಲ್ಲಿ ರಚಿತವಾದ ಈ ಗ್ರಂಥ ಜೈನಧರ್ಮದ ಹತ್ತೊಂಬತ್ತು ಸಾಧಕ ಮಹನೀಯರ ಕಥೆಗಳನ್ನು ನಿರೂಪಿಸುತ್ತದೆ. ಕನ್ನಡದ ಮೊಟ್ಟಮೊದಲ ಗದ್ಯಗ್ರಂಥವೆಂದು ಹೆಸರು ಪಡೆದ ವಡ್ಡಾರಾಧನೆಯನ್ನು ರಚಿಸಿದವನು ಶಿವಕೋಟ್ಯಾಚಾರ್ಯ. ಕನ್ನಡದ ಎರಡನೆಯ ಗದ್ಯಗ್ರಂಥವೆಂಬ ಹಿರಿಮೆಗೆ ಪಾತ್ರವಾಗಿರುವ ಚಾಮುಂಡರಾಯ ಪುರಾಣದಲ್ಲಿ ಶ್ರವಣಬೆಳಗೊಳದ ಪ್ರಸ್ತಾಪವಿಲ್ಲದಿರಬಹುದು. ಆದರೆ, ಆ ಗ್ರಂಥವನ್ನು ಬರೆದ ಚಾವುಂಡರಾಯನೇ ಬೆಳಗೊಳದ ಕೀರ್ತಿ ಜಗತ್ತಿನೆಲ್ಲೆಡೆ ಹರಡಲು ಕಾರಣಕರ್ತನಾದವನು. ಚಾವುಂಡರಾಯನೇ ದೊಡ್ಡಬೆಟ್ಟದ ಮೇಲೆ ಬಾಹುಬಲಿಯ ಬೃಹತ್ತಾದ ಮೂರ್ತಿಯನ್ನು ಕೆತ್ತಿಸಿದ.

ಗೊಮ್ಮಟೇಶ್ವರ ಎಂದೂ ಪರಿಚಿತನಾದ ಬಾಹುಬಲಿ– ಮೊದಲನೆಯ ತೀರ್ಥಂಕರನಾದ ಆದಿದೇವ ಅಥವಾ ವೃಷಭನಾಥನ ಮಗ. ಕವಿ ಪಂಪ ಬರೆದಿರುವ ಆದಿಪುರಾಣವೆಂಬ ಮಹಾಕಾವ್ಯದಲ್ಲಿ, ಆದಿದೇವನ ಜೀವನವೃತ್ತಾಂತದ ಜೊತೆಗೆ ಆತನ ಮಕ್ಕಳಾದ ಭರತ– ಬಾಹುಬಲಿಯರ ಕಥೆಯೂ ವರ್ಣಿತವಾಗಿದೆ. ಆದಿನಾಥನ ಹಿರಿಯ ಮಗನಾದ ಭರತನು ಚಕ್ರರತ್ನವನ್ನು ಪಡೆದ ಗರ್ವದಿಂದ ಮದಿಸಿ, ತಮ್ಮಂದಿರಿಗೆ ಶರಣಾಗುವಂತೆ ಸೂಚನೆ ಕಳುಹಿಸಿದಾಗ, ಬಾಹುಬಲಿಯನ್ನುಳಿದು ಸೋದರರೆಲ್ಲ 'ನಮ್ಮ ಅಕ್ಕಿಯನ್ನು ಇವನಿಗೆ ಕೊಟ್ಟು ನಾವು ಎಂಜಲು ತಿನ್ನುವುದೇಕೆ? ರಾಜ್ಯವನ್ನು ಇವನೇ ಇಟ್ಟುಕೊಳ್ಳಲಿ. ನಾವು ತಂದೆ ತೋರಿದ ದಾರಿಯನ್ನು ಹಿಡಿಯೋಣ' ಎಂದು ರಾಜ್ಯತ್ಯಾಗ ಮಾಡಿ ತಪಸ್ಸಿಗೆ ಹೊರಟುಬಿಟ್ಟರು. ಭರತನ ಸಂದೇಶವನ್ನು ಕೇಳಿದ ಬಾಹುಬಲಿಗೆ ಕ್ರೋಧವೇರಿತು. 'ಇದು ಹಿರಿಯಣ್ಣನಿಗೆ ನಮಸ್ಕರಿಸುವ ಮಾತಲ್ಲ, ತಲೆಯ ಮೇಲೆ ಕತ್ತಿಯನ್ನು ಊರಿ ಒತ್ತಾಯದಿಂದ ಶರಣಾಗಿಸುವ ಪರಿ. ಯಾರ ಶಕ್ತಿ ಮಿಗಿಲೆಂದು ಲೋಕವೆಲ್ಲ ನೋಡಲಿ, ನಿನ್ನ ರಾಜನಿಗೆ ನನ್ನೊಡನೆ ಯುದ್ಧಮಾಡಲು ಹೇಳು'ಎಂದು ಧಿಕ್ಕರಿಸಿ ಕಳುಹಿಸಿದ.

ಯುದ್ಧ ನಿಶ್ಚಯವಾಯಿತು. ಸೋದರರ ವೈಮನಸ್ಯಕ್ಕೆ ಇಡೀ ಸೈನ್ಯವೆಲ್ಲ ಏಕೆ ಹಿಂಸೆಗೀಡಾಗಬೇಕು? ಅಣ್ಣತಮ್ಮಂದಿರೇ ಬಲಾಬಲವನ್ನು ಪರೀಕ್ಷಿಸಿಕೊಂಡರೆ ಸಾಕು ಎಂದು ತೀರ್ಮಾನವಾಯಿತು. ಅದಕ್ಕಾಗಿ ನಿರ್ಧರಿಸಲಾದ ದೃಷ್ಟಿಯುದ್ಧ, ಜಲಯುದ್ಧಗಳೆರಡರಲ್ಲೂ ಬಾಹುಬಲಿಯೇ ಜಯ ಗಳಿಸಿದ. ಕೊನೆಯದಾದ ಮಲ್ಲಯುದ್ಧದಲ್ಲೂ ಗೆದ್ದ ಬಹುಬಲಿ ಅಣ್ಣನನ್ನು ಹಿಡಿದು ಮೇಲೆತ್ತಿ ನೆಲದ ಮೇಲೆಸೆಯಲು ಉದ್ಯುಕ್ತನಾದ. ಅಷ್ಟರಲ್ಲಿ ಅವನ ವಿವೇಕವು ಜಾಗ್ರತವಾಗಿ, ಹಿರಿಯಣ್ಣನೂ ಚಕ್ರವರ್ತಿಯೂ ಆದ ಭರತನಿಗೆ ಹೀಗೆ ಅವಮಾನ ಮಾಡುವುದು ಸಲ್ಲದೆಂದು ಮನವರಿಕೆಯಾಯಿತು. ಅಣ್ಣನನ್ನು ಮೆಲ್ಲನೆ ನೆಲಕ್ಕಿಳಿಸಿದ.

ಪರಾಭವದ ತಾಪದಿಂದ ಭರತನು ತನ್ನ ಚಕ್ರರತ್ನವನ್ನು ಬಾಹುಬಲಿಯ ಮೇಲೆ ಪ್ರಯೋಗಿಸಿದ; ಆದರೆ, ಅದು ಬಾಹುಬಲಿಯನ್ನು ಪ್ರದಕ್ಷಿಣೆ ಮಾಡಿ ಅವನ ಬಲಪಕ್ಕದಲ್ಲಿ ನಿಂತುಬಿಟ್ಟಿತು. ಅಣ್ಣ ತಮ್ಮಂದಿರಲ್ಲೇ ಹೀಗೆ ದ್ವೇಷವನ್ನು ತಂದಿಡುವ ರಾಜ್ಯದ  ಮೋಹ ಸಲ್ಲದೆಂದು ಬಾಹುಬಲಿಗೆ ಮನವರಿಕೆಯಾಯಿತು. ಈ ವಿಷಯಸುಖವನ್ನು ತೊರೆದು ತಪೋನಿರತನಾಗಲು ನಿರ್ಧರಿಸಿದ ಅವನು, ಸಮಸ್ತರಾಜ್ಯವನ್ನೂ ಆಳುವಂತೆ ಅಣ್ಣನಿಗೆ ಒಪ್ಪಿಸಿಕೊಟ್ಟು ತಪಸ್ಸಿಗೆ ಹೊರಟುನಿಂತನು. ತಮ್ಮನ ಕಾಲಿಗೆರಗಿದ ಭರತನು ಕಣ್ಣೀರು ಸುರಿಸುತ್ತ ಹೋಗಬೇಡವೆಂದು ಬೇಡಿಕೊಂಡರೂ ಬಾಹುಬಲಿಯ ಮನಸ್ಸು ಕದಲಲಿಲ್ಲ.

ಇಷ್ಟಾದರೂ ಬಾಹುಬಲಿಗೆ ಕೇವಲಜ್ಞಾನವು ಲಭಿಸಲಿಲ್ಲ. ತಾನು ಭರತನ ನೆಲದಲ್ಲಿ ನಿಂತು ತಪಸ್ಸಿಗೆ ತೊಡಗಿರುವೆನೆಂಬ ಚಿಂತೆ ಅವನನ್ನು ಬಾಧಿಸುತ್ತಿತ್ತು. ಆದಿನಾಥನಿಂದ ಈ ವಿಷಯವನ್ನರಿತ ಭರತನು ಬಾಹುಬಲಿಗೆ ನಮಸ್ಕರಿಸಿ  'ಈ ನೆಲವೆಲ್ಲ ನಿನ್ನದೇ. ಬೇರೆಲ್ಲ ಚಿಂತೆಯನ್ನು ತೊರೆದುಬಿಡು' ಎಂದು ಬೇಡಿಕೊಂಡನು. ಬಾಹುಬಲಿಯ ಚಿಂತೆ ತೊಲಗಿ ಅವನ ಮನಸ್ಸು ತಪದಲ್ಲಿ ಸ್ಥಿರವಾಯಿತು.

ಹೀಗೆ,  ಶೌರ್ಯ, ತ್ಯಾಗ, ಜೀವನಮೌಲ್ಯಗಳ ಶ್ರೇಷ್ಠ ಪ್ರತಿಪಾದಕನಾದ ಬಾಹುಬಲಿ  ತೀರ್ಥಂಕರನಲ್ಲದಿದ್ದರೂ ಜೈನಧರ್ಮದ ಮಹಾನ್ ವ್ಯಕ್ತಿಗಳಲ್ಲಿ ಒಬ್ಬನೆನಿಸಿದ. ಮುಂದೆ ಬೊಪ್ಪಣಕವಿ ಶಾಸನರೂಪದಲ್ಲಿ ಬರೆದ ಗೊಮ್ಮಟಸ್ತುತಿ, ದೊಡ್ಡಯ್ಯನ ಭುಜಬಲಿ ಶತಕ, ಪಂಚಬಾಣನ ಭುಜಬಲಿ ಚರಿತೆ, ಅನಂತಕವಿಯ ಗೊಮ್ಮಟೇಶ್ವರ ಚರಿತೆ ಮೊದಲಾದ ಕಾವ್ಯಗಳಲ್ಲಿ ಬಾಹುಬಲಿಯ ಜೀವನದ ಕಥೆಯನ್ನು ವಿಸ್ತಾರವಾಗಿ ವರ್ಣಿಸಲಾಗಿದೆ.

ಬೆಳ್ಗೊಳ ಎಂದರೆ ಬಿಳಿಯ ಕೊಳ, ಸ್ವಚ್ಛವಾದ ನೀರಿರುವ ಕೊಳ ಎಂದು ಅರ್ಥ. ಶ್ರವಣ ಎಂದರೆ ಜೈನಸನ್ಯಾಸಿ. ದೊಡ್ಡ ಬೆಟ್ಟದ ಹಾದಿಯಲ್ಲಿ ಬಲಗಡೆ ಕಾಣುವ ದೊಡ್ಡ ಪುಷ್ಕರಣಿಯೇ ಬೆಳ್ಗೊಳದ ಹೆಸರಿಗೆ ಕಾರಣವೆನ್ನುವಂತಿಲ್ಲ. ಏಕೆಂದರೆ, ಈ ಕೊಳವನ್ನು 17 ನೇ ಶತಮಾನದಲ್ಲಿ ಮೈಸೂರು ಅರಸರಾದ